International Journal of Kannada Research 2017; 3(2): 96-99

International Journal of Kannada Research
www.kannadajournal.com

ISSN: 2454–5813
IJSR 2017; 3(2): 96-99
© 2017 IJKS
www.kannadajournal.com
Received: 20-02-2017
Accepted: 21-03-2017

**ಯಶುಕುಮಾರ್ ಡಿ.**
ಸಂಶೋಧನಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ–574199

**Correspondence**
**ಯಶುಕುಮಾರ್ ಡಿ.**
ಸಂಶೋಧನಾರ್ಥಿ
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ–574199

# ತುಳುವ ಅವಳಿ ವೀರರ ಆರಾಧನಾ ಪರಿಕರಗಳು ಮತ್ತು ಐತಿಹಾಸಿಕತೆ

**ಯಶುಕುಮಾರ್ ಡಿ.**

ತುಳುವ ಆರಾಧನಾ ರಂಗಭೂಮಿಯನ್ನು ಭೂತಾರಾಧನೆ, ನಾಗಾರಾಧನೆ, ಸಿರಿ ಆರಾಧನೆಗಳಂತೆಯೇ, ಅವಳಿವೀರರ ಆರಾಧನೆಯೂ ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸಿದೆ. ಅವಳಿವೀರರ ಆರಾಧನೆಯೂ ಭೂತಾರಾಧನೆಯಂತೆ ಆರಾಧನಾ ರಂಗಭೂಮಿಯಾಗಿದ್ದು, ನಿರ್ದಿಷ್ಟ ತುಳುವ ಸಮುದಾಯಗಳ ಮೂಲಕ ನಿರ್ದೇಶಿತಗೊಂಡು, ತುಳುವ ಸಮಾಜವನ್ನು ಕೂಡಾ ಆರಾಧನೆಯ ಪರಧಿಯೊಳಗೆ ಸೇರಿಸಿಕೊಂಡಿದೆ. ಹೀಗಾಗಿ ತುಳುವ ಅವಳಿವೀರರ ಆರಾಧನೆಯು ನಿರ್ದಿಷ್ಟ ಸಮುದಾಯಗಳಿಗೆ ಮಾತ್ರ ಕೇಂದ್ರೀಕರಣಗೊಳ್ಳದೆ ಇಡೀ ತುಳುವ ಸಮಾಜವನ್ನು ಕೂಡಾ ಪ್ರಭಾವಿಸುತ್ತದೆ. ಒಂದು ಸಮಾಜವು ಹಲವು ಭಿನ್ನ ಭಿನ್ನ ಸಾಂಸ್ಕೃತಿಕ ವೈರುಧ್ಯಗಳನ್ನು ಹೊಂದಿರುವ ಸಮುದಾಯಗಳ ಮೊತ್ತ ಎಂದು ಪರಿಭಾವಿಸಿದರೆ, ಇಂತಹ ವೈರುಧ್ಯಗಳೇ ಸಮಾಜದ ಆಂತರ್ಯವನ್ನು ಗಟ್ಟಿಗೊಳಿಸುತ್ತದೆ. ಭಿನ್ನತೆಗಳ ನಡುವಿನಿಂದಲೇ ಸಮಾಜ ಎನ್ನುವ ಸಾಂಸ್ಕೃತಿಕ ಬಹುತ್ವದ ಏಕತೆ ನಿರ್ಮಿತಿಯನ್ನು ಪಡೆದುಕೊಳ್ಳುತ್ತದೆ. ತುಳುವ ಸಮಾಜವೂ ಕೂಡಾ ಇಂತಹ ಸಾಂಸ್ಕೃತಿಕ ಬಹುತ್ವಗಳ ಮೂಲಕವೇ ಒಂದು ಎನ್ನುವ ಏಕಮಾದರಿಯನ್ನು ಪ್ರತಿನಿಧಿಸುತ್ತದೆ. ಇದರ ಒಳಗಿನಿಂದಲೇ, ಆರಾಧನೆ, ಆಚರಣೆ, ಇತ್ಯಾದಿ ಸಾಂಸ್ಕೃತಿಕ ವೈವಿಧ್ಯಗಳು ಕಾಣಿಸಿಕೊಳ್ಳುತ್ತವೆ. ಇವುಗಳ ಆಧಾರದಲ್ಲಿ ಒಟ್ಟು ತುಳುವ ಸಮಾಜದ ಐತಿಹಾಸಿಕತೆಯನ್ನು ಕಂಡುಕೊಳ್ಳುವುದೂ ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಅವಳಿವೀರರ ಆರಾಧನೆಯು ತುಳುವ ಸಮುದಾಯಗಳಲ್ಲಿ ಕಾಣಿಸಿಕೊಂಡು, ನಿರ್ದಿಷ್ಟ ಸಮುದಾಯಗಳ ಸಾಂಸ್ಕೃತಿಕ ಶ್ರೀಮಂತಿಕೆಯನ್ನು, ಆಸ್ಮಿತೆಯನ್ನು ಮಾತ್ರ ನಿರೂಪಿಸದೆ, ಒಟ್ಟು ತುಳುವ ಸಮಾಜದ ಅಸ್ಮಿತೆಯಾಗಿಯೂ ಕಂಡುಬರುತ್ತದೆ. ತುಳುನಾಡಿನಲ್ಲಿ ಅವಳಿ ವೀರರನ್ನು ಕೆಲವು ನಿರ್ದಿಷ್ಟ ಸಮುದಾಯಗಳು ಆರಾಧಿಸುತ್ತವೆ. ಕೋಟಿ ಚೆನ್ನಯರನ್ನು ಬೈದೆರ್ಲು ಎಂದು ಬಿಲ್ಲವರು, ಮುದ್ದ ಕಳಲ ಅಥವಾ ಎಣ್ಮೂರದೆಯ್ಯು ಕೇಲತ ಪೆರ್ನೆಯರನ್ನು ಮುಗೇರ್ಲು ಎಂದು ಮುಗೇರರು, ಕಾನದ ಕಟದರನ್ನು ಕಂಬೆರ್ಲು ಎಂದು ಮನ್ಸ/ಆದಿದ್ರಾವಿಡರು, ಕಾಂತಬಾರೆ ಬೂದಬಾರೆಯರನ್ನು ಬಾರೆಯರು ಎಂದು ಮುಲ್ಕಿ ಸೀಮೆಗೆ ಸೀಮಿತವಾಗಿ ಬಿಲ್ಲವರು ಆರಾಧನೆ ಮಾಡುತ್ತಾರೆ. ಈ ಅವಳಿ ವೀರರು ಆರಾಧನೆಗೆ ಒಳಗಾಗುವ ಸಮುದಾಯಗಳ ಸಾಂಸ್ಕೃತಿಕ ವೀರರಾಗಿ (Cultural Heroe) ಯೂ ಗುರುತಿಸಿಕೊಳ್ಳುತ್ತಾರೆ. ಸಮುದಾಯಗಳ ಸಾಂಸ್ಕೃತಿಕ ಮಹತ್ವವನ್ನು ಅವಳಿ ವೀರರ ಆರಾಧನೆಯ ಮೂಲಕ ಕಟ್ಟಿಕೊಳ್ಳುವ ಸಮುದಾಯಗಳು, ಆ ಮೂಲಕ ಅವಳಿ ವೀರರನ್ನು ತಮ್ಮ ಸಾಂಸ್ಕೃತಿಕ ನಾಯಕರಾಗಿ ಪರಿಭಾವಿಸಿಕೊಳುತ್ತವೆ. ಅವಳಿ ವೀರರು ತುಳುವ ಸಮಾಜದ ಒಳಗಿನಿಂದ ನಿರ್ದಿಷ್ಟ ಸಮುದಾಯಗಳಲ್ಲಿ ಕಾಣಿಸಿಕೊಂಡು, ತಾವು ಸಮಾಜದ ಶ್ರೇಣೀಕರಣದಲ್ಲಿ ಪಡೆಯುವ ಸ್ಥಾನಗಳ ಮೂಲಕ ಉಳಿದ ಸಮುದಾಯಗಳನ್ನು ಆರಾಧನೆಯಲ್ಲಿ ಒಳಗೊಳ್ಳುವಂತೆಯೂ ಮಾಡುತ್ತವೆ. ಹೀಗಾಗಿ ಸಾಮಾಜಿಕ ಶ್ರೇಣಿಯಲ್ಲಿ ಮೇಲಿರುವ ಬಿಲ್ಲವರ ಬೈದೆರ್ಲು ಆರಾಧನೆಯಲ್ಲಿ ಸಮಾಜದ ಹಲವು ಸಮುದಾಯಗಳ ಪಾಲ್ಗೊಳ್ಳುವಿಕೆ ಕಂಡುಬಂದರೆ, ಕಂಬೆರ್ಲು ಸಾಮಾಜಿಕ ಶ್ರೇಣಿಯಲ್ಲಿ ಅತ್ಯಂತ ಕೆಳಗಿರುವುದರಿಂದ ಸಮಾಜದ ಇತರ ಸಮುದಾಯಗಳ ಪಾಲ್ಗೊಳ್ಳುವಿಕೆ ಅತ್ಯಂತ ಕಡಿಮೆ ಇರುತ್ತದೆ. ಇಂತಹ ವಿಲೋಮ ಸಂಬಂಧವನ್ನು ಕೂಡಾ ಅವಳಿ ವೀರರ ಆರಾಧನೆಯಲ್ಲಿ ಕಾಣಬಹುದು.

**ಅವಳಿವೀರರ ಆರಾಧನಾ ಪರಿಕರಗಳು:**

ಅವಳಿ ವೀರರ ಆರಾಧನೆಯ ಭೌತಿಕ ಪರಿಕರಗಳು ಮತ್ತು ಆರಾಧನಾ ಸಂದರ್ಭದಲ್ಲಿ ಬಳಸುವ ರಂಗ ಪರಿಕರಗಳು ಇವೆಲ್ಲವನ್ನು ಒಟ್ಟಾಗಿ ಆರಾಧನಾ ಪರಿಕರಗಳು ಎಂದು ಪರಿಕಲ್ಪಿಸಿಕೊಳ್ಳಬಹುದು. ಅವಳಿವೀರರ ಭೌತಿಕ ಪರಿಕರಗಳು ಆರಾಧನೆಯ ಹೊರತಾಗಿಯೂ ವಿಶೇಷವಾದ ನಂಬುಗೆಯನ್ನು ಹೊಂದಿರುವುದರಿಂದ ಆರಾಧನೆ ಮತ್ತು ಆರಾಧನಾ ಸಂದರ್ಭದ ಹೊರತಾಗಿಯೂ ಅದಕ್ಕೆ ವಿಶೇಷವಾದ ಸ್ಥಾನವು ತುಳುವ ಜನಪದರಿಂದ ದೊರೆಯುತ್ತದೆ.

**ಆರಾಧನಾ ಪರಿಕರಗಳನ್ನು ಈ ಕೆಳಗಿನಂತೆ ಗುರುತಿಸಬಹುದು:**

1. **ಭೌತಿಕ ಪರಿಕರಗಳು–** ಗರೋಡಿ, ಕೊಟ್ಯ, ಕಳ, ಆಯುಧಗಳು, ಪ್ರತಿಮೆ, ಕಲ್ಲು, ಉರು.
2. **ರಂಗ ಪರಿಕರಗಳು–** ವೇಷ ಭೂಷಣ, ಬಣ್ಣಗಾರಿಕೆ, ಸಂಕೇತಗಳು, ಆಹಾರ ಕ್ರಮ.

**ಭೌತಿಕ ಪರಿಕರಗಳು:**

ಅವಳಿ ವೀರರ ಆರಾಧನಾ ನೆಲೆಗಳನ್ನು ನಿರ್ದಿಷ್ಟ ಅವಳಿವೀರರಿಗೆ ಸಂವಾದಿಯಾಗಿ ವಿಶಿಷ್ಟವಾಗಿ ಗುರುತಿಸಲಾಗುತ್ತದೆ ಮತ್ತು ಅವುಗಳ ರಚನೆಯೂ ಭಿನ್ನವಾಗಿರುತ್ತದೆ. ಬೈದೆರ್ಲುಗಳನ್ನು ಗರೊಡಿಗಳಲ್ಲಿ, ಮುಗೇರ್ಲುಗಳನ್ನು ಕೊಟ್ಯಗಳಲ್ಲಿ, ಕಂಬೆರ್ಲುಗಳನ್ನು ಕಳದಲ್ಲಿ ಆರಾಧನ ನೆಲಗಳ ಮೂಲಕ ಆರಾಧಿಸಲಾಗುತ್ತದೆ. ಅಲ್ಲದೇ ಬೈದೆರ್ಲುಗಳಿಗೆ ಸುರಿಯ ಆಯುಧವಾದರೆ, ಮುಗೇರ್ಲುಗೆ ಬಿಲ್ಲುಬಾಣ, ಕಂಬೆರ್ಲುಗೆ ಅಲುಂಬುಡ ಗಿಡದ ದಂಟೆ ಆಯುಧವಾಗಿದೆ. ಬೈದೆರ್ಲುಗಳಿಗೆ ಪಾಪೆ ರೂಪದ ಪ್ರತಿಮೆ, ಮರದ ಉರುಗಳು ಇದ್ದು, ಮುಗೇರ್ಲು ಕಂಬೆರ್ಲುಗೆ ಕಲ್ಲು ಇದೆ.

ಆರಾಧನಾ ನೆಲೆಗಳನ್ನು ಪರಿಗಣಿಸಿದರೆ ಇಂತಹ ರಚನಾತ್ಮಕ ನಿರ್ಮಿತಿಗಳು ಜನಪದ ಶಿಲ್ಪಗಳೆಂದು ಪರಿಭಾವಿಸಬಹುದು. "ಕರಾವಳಿಯ ಭೂತದ ಗುಡಿಗಳಲ್ಲಿ, ಬೈದರ ಗರೊಡಿಗಳಲ್ಲಿ ಕಂಡುಬರುವ ಪಂಚಲೋಹದ ವಿವಿಧ ದೈವಗಳ ಪ್ರತಿಮೆಗಳು, ಮುಖವಾಡಗಳು ಕದಿರ್‌ಮುಡಿ, ತಿರಿಗುಬ್ಬೆ, ಚಪ್ಪರೊಂಬು, ಒಲಿಕಿರೀಟಗಳಂತಹ ಅಲಂಕರಣ ಸಾಮಾಗ್ರಿಗಳು ಜನಪದ ಶಿಲ್ಪದ ವಿವಿಧ ಅಭಿವ್ಯಕ್ತಿಗಳು" (ನಾವಡ, ಎ.ವಿ. (ಪ್ರೊ); 2015, 444) ಇಂತಹ ಅಭಿವ್ಯಕ್ತಿಗಳು ಒಂದು ಇಡೀ ಪರಿಸರವನ್ನು ಅಲೌಕಿಕತೆಯ ಪಾವಿತ್ರ್ಯದ ನೆಲೆಯನ್ನು ಅರಾಧನಾ ಸಂಕಿರಣಗಳಿಗೆ ಒದಗಿಸುತ್ತದೆ. ಇವುಗಳ ಹಿಂದೆ ಜನಪದರ ಲೋಕದೃಷ್ಟಿಯು ಕೆಲಸಮಾಡಿರುವುದನ್ನು ಕಂಡುಕೊಳ್ಳಬಹುದು. ಗರೊಡಿ ಎನ್ನುವ ರಚನೆ ಮತ್ತು ಗರೊಡಿಯ ಉಗಮವು ವಿದ್ವಾಂಸರ ಅಭಿಪ್ರಾಯದಂತೆ ಪುರಾತನ ಕಾಲದಲ್ಲಿ ಅಂಗಸಾಧನೆಯ ಕೇಂದ್ರಗಳಾಗಿದ್ದವು. "ಕೋಟಿ ಚೆನ್ನಯರು ಬದುಕಿರುವಷ್ಟು ಕಾಲ ತುಳುನಾಡಿನ ಮೂಲೆ ಮೂಲೆಗಳಲ್ಲಿ ಎಲ್ಲಾ ಗರಡಿಗಳಲ್ಲಿ ಅಂಗಸಾಧನೆ ಮತ್ತು ಮಲ್ಲ ಸಾಧನೆಯ ವಿವಿಧ ಪಟ್ಟುಗಳ ತರಭೇತಿ ನಡೆಯುತ್ತಿತ್ತು" (ಬನ್ನಂಜೆ ಬಾಬು ಅಮೀನ್; 2014; 256). ಕೇರಳದಲ್ಲಿ ಕಳರಿ ವಿದ್ಯೆಯನ್ನು ಕಲಿಸುವ ಗರಡಿಗಳಂತೆಯೇ ತುಳುನಾಡಿನ ಗರಡಿಗಳೂ ಅಂಗಸಾಧನೆಯ ವಿದ್ಯೆಗಳನ್ನು ಕಲಿಸುವ ಕೇಂದ್ರಗಳಾಗಿದ್ದವು. ತುಳುನಾಡಿನ ರಾಜಕೀಯ ವ್ಯವಸ್ಥೆ, ಯುದ್ಧ, ಮತ್ತು ಸೈನಿಕ ವೃತ್ತಿಗಳಲ್ಲಿ ಆದ ಬದಲಾವಣೆಗಳ ಕಾರಣಕ್ಕಾಗಿ ಯುದ್ಧ ಪಟ್ಟುಗಳ ಕಲಿಕಾ ಕೇಂದ್ರವಾಗಿದ್ದ ಗರೊಡಿಗಳು ತಮ್ಮ ಮೂಲದ ಆಶಯಗಳಿಂದ ಕಳಚಿಕೊಂಡು, ಆರಾಧನಾ ನೆಲೆಗಳಾದವು. ಇಂತಹ ಗರೊಡಿಗಳ ರಚನೆ ಮಧ್ಯಕಾಲೀನ ತುಳು ಚರಿತ್ರೆಗಿಂತಲೂ ಪೂರ್ವದಲ್ಲಿಯೇ ಇದ್ದವು. ರಾಜಕೀಯ, ಆಡಳಿತಾತ್ಮಕ ವ್ಯವಸ್ಥೆಗಳು, ಯೋಧತ್ವದ ಸಾಂಕೇತಿಕತೆ ಗರಡಿಗಳ ಮೂಲಕ ಕಂಡುಕೊಂಡು, ಮಧ್ಯಕಾಲೀನ ತುಳುವ ಇತಿಹಾಸಕ್ಕಿಂತಲೂ ಬಹಳಷ್ಟು ಹಿಂದೆ ಚರಿತ್ರೆಯನ್ನು ಕೊಂಡುಹೋಗುತ್ತದೆ.

ಕಳ, ಕೊಟ್ಯ ಎನ್ನುವ ಕಂಬೆರ್ಲು, ಮುಗೇರ್ಲುಗಳ ಆರಾಧನಾ ನೆಲೆಗಳು, ತುಳುವ ಜನಪದರ ನಿತ್ಯ ಜೀವನದಲ್ಲಿನ ಪ್ರಯೋಗಗಳಾಗಿಯೇ ಕಾಣಿಸುತ್ತವೆ. ಮನೆಯ ಪರಿಸರದ ಕೊಟ್ಯ, ಕಳಗಳು, ಸಮುದಾಯಗಳ ಆರಾಧನಾ ನೆಲೆಗಳಾಗಿಯೂ ಕಾಣಿಸುವ ಮೂಲಕ ಪ್ರಕೃತಿ ಮತ್ತು ಆರಾಧನೆ, ಜನಜೀವನ ಇವುಗಳು ಒಂದಕ್ಕೊಂದು ಬೆಸೆದುಕೊಂಡಿರುವ ಸ್ಥಿತಿಯನ್ನು ಕಾಣಿಸುತ್ತದೆ. ಹೀಗಾಗಿ ಜನಪದರ ಜೊತೆಯಲ್ಲಿಯೇ ಆರಾಧನೆಯು, ಜನಪದರ ನಾಗರೀಕ ಕುರುಹುಗಳಾದ ಮನೆಯ ಪರಿಸರದೊಂದಿಗೆ ನಂಟು ಹೊಂದಿದ್ದು, ಆರಾಧನೆಯನ್ನು ನಾಗರೀಕತೆಯ ಚಲನಶೀಲತೆಯೊಂದಿಗೇ ಅದರ ಐತಿಹಾಸಿಕತೆಯನ್ನು ಕಂಡುಕೊಳ್ಳಬೇಕಾದ ಅನಿವಾರ್ಯತೆಯನ್ನು ಮುಂದಿಡುತ್ತದೆ.

ಗರೊಡಿಗಳಲ್ಲಿ ಕಾಣುವ 'ಉರು' ಎನ್ನುವ ಮರದ ಕಾಷ್ಠ ಶಿಲ್ಪಗಳ ರಚನೆಯ ಮೂಲಕ ಅರಾಧನೆಯ ಐತಿಹಾಸಿಕತೆಯ ಜೊತೆಗೆ ತುಳುವ ಚರಿತ್ರೆಯ ಸುಳುಹುಗಳನ್ನು ಕಂಡುಕೊಳ್ಳಬಹುದು. "ಭೂತಾರಾಧನೆಯು ಈಗಿರುವ ಸ್ವರೂಪದಲ್ಲಿ ಕನಿಷ್ಠ 14–15ನೇ ಶತಮಾನದ ಹೊತ್ತಿಗೆ ಬಳಕೆಗೆ ಬಂದಿರಬೇಕು. ಕರಾವಳಿಯಲ್ಲಿ ಯುಕ್ಷಗಾನ ಪರಂಪರೆಯು ಸುಮಾರು 17ನೆಯ ಶತಮಾನದ ಹೊತ್ತಿಗೆ ರೂಪುಗೊಂಡಿರಬಹುದೆ0ದು ಡಾ. ಶಿವರಾಮ ಕಾರಂತರು ಬರೆಯುತ್ತಾರೆ. ಇಂದು ನಮ್ಮ ಕಣ್ಣಿಗೆ ಕಾಣುವ ಉರುಗಳ ಸೃಷ್ಠಿಯ ಮೇಲೆ ಭೂತಾರಾಧನೆಯ ಪ್ರಭಾವ ಇದ್ದಂತೆ ಕಾಣಿಸುತ್ತಿಲ್ಲ. ಈ ಎರಡು ಪ್ರಾಕ್ಕಲ್ಪನೆಯ ಆಧಾರದಲ್ಲಿ ಉರುಗಳ ನಿರ್ಮಾಣ ಹಾಗೂ ಪ್ರಸರಣದ ಮೇಲೆ ಸ್ಥಳೀಯ ಯಕ್ಷಗಾನ ಹಾಗೂ ಭೂತಾರಾಧನೆ ಪ್ರಭಾವ ಬೀರಿಲ್ಲ ಎನ್ನಬಹುದು. ಹೀಗಾಗಿ ಉರುಗಳ ಕಾಲವನ್ನು 14ನೆಯ ಶತಮಾನಕ್ಕೆ ಹಿಂದಿನದು ಎನ್ನಬಹುದು (ನಾವಡ, ಎ.ವಿ. ; 2015; 453). ಗರೊಡಿಗಳ ಸಂಕಿರಣದಲ್ಲಿರುವ ಉರುಗಳ ರಚನೆ ಮೂಲಕ ಗರೊಡಿ ಹಾಗೂ ಉರುಗಳ ಚರಿತ್ರೆ 14ನೆಯ ಶತಮಾನಕ್ಕೂ ಹಿಂದೆ ಹೋಗುತ್ತದೆ. ಅಲ್ಲದೇ, ಪಿತೃ ಆರಾಧನೆ ಎನ್ನುವುದೂ ನಾಗರೀಕ ಸಮುದಾಯಗಳಲ್ಲಿ ಸಹಜವಾಗಿ ನಡೆಯುತ್ತಿತ್ತು. ಸತ್ತ ತಮ್ಮ ಹಿರಿಯರ ಜೊತೆ ಮರು ಸಂಧಾನದ ಸಾಧ್ಯತೆಗಳನ್ನು, ಅವರನ್ನು ಮುಖಾಮುಖಿಯಾಗುವ ಸಂದರ್ಭಗಳನ್ನು ನಮ್ಮ ಪೂರ್ವಿಕರೂ ಮಾಡಿಕೊಂಡು ಬಂದಿದ್ದಾರೆ. ಇಂತಹ ಪಿತೃ ಆರಾಧನೆಯ ರೂಪವಾಗಿಯೂ ಕಂಡುಬರುವ ಅವಳಿ ವೀರರ ಆರಾಧನೆಯು ಅತ್ಯಂತ ಪ್ರಾಚೀನವಾದುದೂ ಹೌದು. ಇವುಗಳ ಆರಾಧನಾ ನೆಲೆಗಳಲ್ಲಿಯೇ ಉರುಗಳೂ ಇರುವುದರಿಂದ ಆರಾಧನೆಯ ಪ್ರಾಚೀನತೆಯನ್ನು 14ನೇ ಶತಮಾನಕ್ಕಿಂತ ಹಿಂದೆ ಕೊಂಡುಹೋಗುತ್ತದೆ. "ಉರುಗಳ ರೂಪಗಳು ಪ್ರಾಚೀನಕಾಲದ ರಹಸ್ಯ ತಾಂತ್ರಿಕ ಪಂಥಗಳನ್ನು ನೆನಪಿಸುತ್ತವೆ. . . . . . . ಉರುಗಳ ನಿರ್ಮಾಣದ ಹಿಂದೆ ಕರ್ನಾಟಕದ ನಾಥ, ಪಾಶುಪತ, ಲಕುಲೀಶ, ಕಾಳಮುಖ ಮುಂತಾದ ರಹಸ್ಯ ತಾಂತ್ರಿಕ ಪಂಥಗಳ ಪಾತ್ರ ಇದಂತೆ ಕಾಣಿಸುತ್ತದೆ. ಅಂದರೆ ಸುಮಾರು 11–12ನೇ ಶತಮಾನದಲ್ಲಿ ಈ ಉರುಗಳು ಕರಾವಳಿಯಲ್ಲಿ ನಿರ್ಮಾಣಗೊಂಡಿರಬಹುದು" (ನಾವಡ. ಎ.ವಿ.; 2015, 454). ಉರುಗಳ ನಿರ್ಮಾಣದ ಹಿಂದಿನ ಕಾರಣಗಳು, ಪ್ರಭಾವಗಳು ಮತ್ತು ಚರಿತ್ರೆಯು 11–12ನೇ ಶತಮಾನದಷ್ಟು ಹಿಂದೆ ಇದ್ದರೂ, ಗರಡಿ ಸಂಕಿರಣದಲ್ಲಿ ಉರುಗಳ ಪ್ರವೇಶವನ್ನು ಬೈದೆರ್ಲು ಆರಾಧನೆಯ ಬಳಿಕ ಗುರುತಿಸಬಹುದು. ಹೀಗಾಗಿ ಅವಳಿವೀರ ಆರಾಧನೆಯು ಸುಮಾರು 14ನೆಯ ಶತಮಾನದಷ್ಟು ಹಿಂದೆ ಸ್ಪಷ್ಟವಾದ ಗುರುತನ್ನು ಪಡೆಯುತ್ತದೆ.

ಅವಳಿ ವೀರರ ಆಯುಧಗಳನ್ನು ಗಮನಿಸಿದರೆ ಹಲವು ಕುತೂಹಲಕರ ಅಂಶಗಳು ತಿಳಿದುಬರುತ್ತವೆ. ಬೈದೆರ್ಲು ಸುರಿಯ, ಮುಗೇರ್ಲು ಬಿಲ್ಲುಬಾಣ, ಕಂಬೆರ್ಲು ಮರದ ದಂಟೆಯು ಅವರ ಆಯುಧಗಳಾಗಿವೆ. ಈ ಆಯುಧಗಳ ರೂಪ ಮತ್ತು ಸ್ವರೂಪಗಳು ನಾಗರೀಕತೆಯ ವಿಕಾಸವನ್ನು ಸಂಕೇತಿಸುತ್ತವೆ. ಮರದ ದಂಟೆಯನ್ನು ನಾಗರೀಕತೆಯ ಆರಂಭದಲ್ಲಿ ಆಯುಧವಾಗಿ ಮನುಷ್ಯರು ಬಳಸಿದ್ದರೆ, ಆ ಬಳಿಕ ವಿಕಾಸಗೊಂಡು ಬಿಲ್ಲು ಬಾಣಗಳ ಬಳಕೆ ಬಂದಿತು. ನಾಗರೀಕತೆಯ ಉಚ್ಛ್ರಾಯ ಸ್ಥಿತಿಯಲ್ಲಿ ಲೋಹದ ಬಳಕೆ, ಖಡ್ಗ, ಕತ್ತಿಗಳ ಬಳಕೆ ಬಂತು. ಹೀಗೆ ಅವಳಿ ವೀರರ ಆಯುಧಗಳಲ್ಲಿಯೂ ನಾಗರೀಕತೆಯ ವಿಕಾಸವನ್ನು ಗುರುತಿಸಬಹುದು. ಇವುಗಳ ಸಾಂಕೇತಿಕತೆಯು ಅವಳಿಗಳ ಆಯುಧಗಳಲ್ಲಿ ಕಂಡುಬಂದಿದ್ದು, ಯೋಧತ್ವದ ಸಂಕೇತವಾದ ಸುರಿಯ, ಬಿಲ್ಲುಬಾಣಗಳು, ಕೃಷಿ ಮತ್ತು ಆದಾಯದ ಮೂಲವಾಗಿ ಮರದ ದಂಟೆಗಳು ಕಂಡುಬರುತ್ತವೆ. ಹೀಗಾಗಿ ರಾಜಕೀಯ ಆಡಳಿತದ ಯೋಧತ್ವ, ರಾಜ್ಯದ ಆದಾಯದ ಮೂಲವಾದ ಕೃಷಿಯ ಮರದ ದಂಟೆಯು ಸಾಂಕೇತಿಕವಾಗಿ ರಾಜಾಡಳಿತವನ್ನು, ಅರಸೊತ್ತಿಗೆಯನ್ನು ಕಾಣಿಸುತ್ತವೆ. ಈ ಹಿನ್ನೆಲೆಯಲ್ಲಿ ಅವಳಿವೀರರು ತುಳುನಾಡಿನ ರಾಜಾಡಳಿತವು ಸಂಕಿರಣ ಸ್ಥಿತಿಯಲ್ಲಿದ್ದು, ಸ್ಥಿತ್ಯಂತರದ ಕಾಲದಲ್ಲಿ ಕಂಡುಬರುವುದನ್ನು ಸ್ಪಷ್ಟವಾಗಿಸಿಕೊಳ್ಳಬಹುದು.

ತುಳುನಾಡಿನ ಆಡಳಿತಾತ್ಮಕ ವ್ಯವಸ್ಥೆಯ ರಾಜಾಡಳಿತದಲ್ಲಿ ಸುದೀರ್ಘ ಕಾಲ ಆಡಳಿತ ನಡೆಸಿದವರು ಅಳುಪರು. "ಕ್ರಿ.ಶ. 5ನೆ ಶತಮಾನದಿಂದ 14ನೆ ಶತಮಾನಾಂತ್ಯದ ತನಕ, ಸುಮಾರು 9 ಶತಮಾನಗಳ ಕಾಲ, ನಿರಂತರವಾಗಿ ತುಳುನಾಡನ್ನಾಳಿದವರು ಅಳುಪ ವಂಶದ ಅರಸರು" (ಪುಂಡಿಕ್ಯಾ ಗಣಪಯ್ಯ ಭಟ್ (ಡಾ); 1997, 36). 14ನೇ ಶತಮಾನದ ಬಳಿಕ ತುಳುನಾಡನ್ನು ವಿಜಯನಗರದ ಅರಸರು ಆಳ್ವಿಕೆ ನಡೆಸಲು ಆರಂಭಿಸಿದರು. "ಕ್ರಿಶ. 1336ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ತುಳುನಾಡು ವಿಜಯನಗರ ಸಾಮ್ರಾಜ್ಯದ ಪ್ರಭಾವಕ್ಕೊಳಗಾಯಿತು. ಕ್ರಿ.ಶ. 1345ರ ಸುಮಾರಿಗೆ ತನ್ನ ಸ್ವಾಂತತ್ರ್ಯವನ್ನು ಕಳೆದುಕೊಂಡು ವಿಜಯನಗರ ಸಾಮ್ರಾಜ್ಯದ

ಭಾಗವಾಯಿತು.'' (ವಿವೇಕ ರೈ ಬಿ.ಎ. (ಡಾ),(ಸಂ); 2007, 43). ಒಂಬತ್ತು ಶತಮಾನಗಳ ಕಾಲ ದೀರ್ಘವಾದ ಆಳುಪ ಆಡಳಿತವನ್ನು ಅನುಭವಿಸಿದ್ದ ತುಳುನಾಡು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟ ಸಂಕೀರ್ಣ ಸ್ಥಿತ್ಯಂತರದ ಕಾಲಘಟ್ಟ 14ನೆಯ ಶತಮಾನ. 9 ಶತಮಾನಗಳ ಆಡಳಿತದ ಕೊನೆ ಎನ್ನುವುದು ಸಹಜವಾಗಿ ತುಳುನಾಡಿನಲ್ಲಿ ಪ್ರತಿರೋಧವನ್ನು ತಂದೊಡ್ಡುವ ಕಾಲವಾಯಿತು. ಹೀಗಾಗಿ ವೀರತ್ವ, ಯೋಧತ್ವಗಳು ಮುನ್ನೆಲೆಯಲ್ಲಿ ಕಾಣಿಸಿಕೊಂಡವು. ಇಂತಹ ಸಂಕರಣ ಕಾಲದಲ್ಲಿಯೇ ಅವಳಿ ವೀರರೂ ಕಾಣಿಸಿಕೊಂಡರು. ನಿರ್ದಿಷ್ಟ ಅವಳಿವೀರರು ಯೋಧರಾಗಿ ತುಳುನಾಡಿನ ಸಾಮಂತ ಅರಸರ ಸೈನ್ಯದಲ್ಲಿದ್ದು, ಅವರೊಳಗಿನ ಅಂತ:ಕಲಹಗಳಲ್ಲಿ ಅವಸಾನವಾದರು. ಆದರೆ ಇಡೀ ತುಳುನಾಡಿನಲ್ಲಿದ್ದ ಯೋಧತ್ವದ ಅಲೆಯಲ್ಲಿ ಅವಳಿವೀರರ ಸಾಧನೆ, ಪರಾಕ್ರಮಗಳೂ ಸಮುದಾಯಗಳ ಆಂತರ್ಯದಿಂದ ಮರುಹುಟ್ಟು ಪಡೆಯುವ ಮೂಲಕ ಅವಳಿವೀರರನ್ನು ಆರಾಧ್ಯರನ್ನಾಗಿಸಿತು. ಹೀಗಾಗಿಯೇ ಅವಳಿ ವೀರರ ಆಯುಧಗಳು ಸಾಂಕೇತಿಸುವ ಯೋಧತ್ವ, ಆದಾಯದ ಮೂಲಗಳು ಅವಳಿ ವೀರರ ಆರಾಧನೆಯನ್ನು ತುಳುನಾಡಿನ ಚರಿತ್ರೆಯ 14ನೆಯ ಶತಮಾನದಲ್ಲಿ ಸ್ಪಷ್ಟವಾದ ಹೆಗ್ಗುರುತನ್ನು ಪಡೆದುಕೊಳ್ಳುತ್ತದೆ.

**ರಂಗಪರಿಕರಗಳು:**

ಅವಳಿ ವೀರರ ಆರಾಧನೆಯಲ್ಲಿ ಆರಾಧನಾ ರಂಗದಲ್ಲಿ ಆರಾಧನಾ ಸಂದರ್ಭದಲ್ಲಿ ಬಳಸುವ ಬಣ್ಣಗಾರಿಕೆ, ವೇಷಭೂಷಣಗಳು ಆಹಾರಕ್ರಮ, ಸಂಕೇತಗಳು ಇವೆಲ್ಲವುಗಳನ್ನು ರಂಗ ಪರಿಕರಗಳೆಂದು ಗುರುತಿಸಬಹುದು. ನಿರ್ದಿಷ್ಟ ದಿನದಂದು, ನಿರ್ದಿಷ್ಟ ಪರಿಸರದಲ್ಲಿ ನಿಗದಿತ ಸಮಯದಲ್ಲಿ ಅಲೌಕಿಕ ನೆಲೆಯ ಅವಳಿವೀರರನ್ನು ಜೋಗಕ್ಕೆ ಬರಿಸಿ ಅವಳಿ ವೀರರನ್ನು ಸಂತುಷ್ಟಗೊಳಿಸುವ ಮೂಲಕ ಸಮುದಾಯಗಳು ಒಂದು ಬಗೆಯ ಸಂತೃಪ್ತಿಯನ್ನು ಪಡೆದುಕೊಳ್ಳುತ್ತವೆ. "ಮಧ್ಯಂತರ ಜಗತ್ತಿನ ಸೃಷ್ಟಿಯು ಕಾಲ್ಪನಿಕವೂ ಭ್ರಾಮಕವೂ ಆಗಿರುತ್ತದೆ. ಈ ಭ್ರಾಮಕ ಜಗತ್ತಿನ ಕಲಾತ್ಮಕ ಅಭಿವ್ಯಕ್ತಿಯನ್ನು ಆರಾಧನೆಯ ಸಂದರ್ಭದಲ್ಲಿ ಕಾಣಬಹುದು'' (ಚಿನ್ನಪ್ಪ ಗೌಡ, ಕೆ. (ಡಾ); 1990; 24). ಇಂತಹ ಸಾಂಸ್ಕೃತಿಕ ಜಗತ್ತಿನ ಭ್ರಾಮಕ ಕಲಾಭಿವ್ಯಕ್ತಿಯನ್ನು ನಿರ್ಮಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ನಮ್ಮ ನಡುವಿನ ವ್ಯಕ್ತಿಗಳನ್ನೇ ಮಾಧ್ಯಮಗಳಾಗಿ ಮಧ್ಯಂತರ ಜಗತ್ತಿನೊಂದಿಗೆ ವ್ಯವಹರಿಸುವಂತೆ ಮಾಡುತ್ತೇವೆ. ಆರಾಧನೆಗಳಲ್ಲಿ ಹೀಗೆ ನಮ್ಮ ನಡುವಿನ ವ್ಯಕ್ತಿಗಳನ್ನು ನೇಮಿಸಿ ಅವರನ್ನು ಸಾಮಾನ್ಯರಿಂದ ಬೇರ್ಪಡಿಸುವ ಕಾರಣವಾಗಿ ಅಲೌಕಿಕ ವ್ಯಕ್ತಿಗಳನ್ನಾಗಿ ಅವರ ಚರ್ಯೆಯನ್ನು ಬದಲಾಯಿಸಲಾಗುತ್ತದೆ. ಇಂತಹ ಬದಲಾವಣೆಗೆ ಅನುಗುಣವಾಗಿ ರಂಗ ಪರಿಕರಗಳನ್ನು ಉಪಯೋಗಿಸುತ್ತೇವೆ. ಈ ರಂಗಪರಿಕರಗಳು ಆರಾಧನೆಯಲ್ಲಿ ಬಹಳ ಮುಖ್ಯ ಪಾತ್ರವಹಿಸುತ್ತವೆ. ಮಧ್ಯಂತರ ಜಗತ್ತಿನ ಕಲಾವಿದರ ಅನುಭವ ಮತ್ತು ಕಲಾತ್ಮಕತೆಯು ರಂಗಪರಿಕರದಲ್ಲಿ ಬಹಳಷ್ಟು ಮುಖ್ಯ ಆಗುತ್ತದೆ. ಇದರ ಜೊತೆಯಲ್ಲಿಯೇ ನಿರ್ದಿಷ್ಟ ಅವಳಿ ವೀರರಿಗೆ ಸಾಮಾಜಿಕವಾಗಿ ಅವರು ಹೊಂದುವ ಸ್ಥಾನಮಾನಗಳಿಗೆ ಅನುಗುಣವಾಗಿಯೂ ರಂಗಪರಿಕಗಳ ವೈವಿಧ್ಯತೆಯು ಕಂಡುಬರುತ್ತದೆ. ಹೀಗಾಗಿ ಪ್ರತೀ ಅವಳಿವೀರರಲ್ಲಿಯೂ ಈ ರಂಗ ಪರಿಕರದ ಬದಲಾವಣೆಯು ಚಾರಿತ್ರಿಕ ಅಂಶಗಳ ಪ್ರಭಾವವನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

ಬೈದೆರ್ಲು ನೇಮ, ಮುಗೇರ್ಲು ಕೋಲ, ಕಂಬೆರ್ಲು ಮಾನ್ಯೆಚ್ಚಿಗಳಲ್ಲಿ (ಬಾರೆಯರಿಗೆ ಪ್ರದರ್ಶನಾತ್ಮಕ ಆರಾಧನೆ ಇಲ್ಲ) ವೈವಿಧ್ಯತೆಯನ್ನು ಗುರುತಿಸಬಹುದು. ನೇಮ, ಕೋಲಗಳಲ್ಲಿ ಬಣ್ಣಗಾರಿಕೆಯು ಭೂತಾರಾಧನೆಯನ್ನೇ ಹೋಲುವಂತಿದ್ದು, ಅರದಳವು ಮುಖವರ್ಣಿಕೆಯಲ್ಲಿ ಪ್ರಧಾನವಾಗಿರುತ್ತದೆ. ಹಳದಿ ಬಣ್ಣವು ಶೌರ್ಯ, ಪರಾಕ್ರಮವನ್ನು ಸಾಂಕೇತಿಸುತ್ತದೆ. ಹೀಗಾಗಿ ಬೈದೆರ್ಲು ನೇಮ, ಮುಗೇರ್ಲು ಕೋಲಗಳಲ್ಲಿನ ಹಳದಿ ಬಣ್ಣವೂ ಅವಳಿಗಳ ಯೋಧತ್ವದ ಸಾಂಕೇತಿಕತೆಯೇ ಆಗಿದೆ. ತುಳುವ ಚಾರಿತ್ರಿಕ ಸಂದರ್ಭದಲ್ಲಿ ಯೋಧತ್ವಕ್ಕೆ ವಿಶೇಷವಾದ ಸ್ಥಾನವಿದೆ. ತುಳುವ ಚರಿತ್ರೆಯಲ್ಲಿ ಮಧ್ಯಕಾಲೀನ ಯುಗದಲ್ಲಿ ಗುರುತಿಸಿಕೊಳ್ಳುವ ಅವಳಿವೀರರು ಆ ಕಾಲದ ವೀರತ್ವದ ಸಾಂಕೇತಿಕ ರೂಪವನ್ನು ಬಣ್ಣಗಾರಿಕೆಯ ಮೂಲಕ ಮರುನಿರೂಪಿಸುತ್ತಾರೆ. ವಿಶೇಷವಾಗಿ ಆರಾಧನಾ ಸಂದರ್ಭದ ಮಧ್ಯಂತರದಲ್ಲಿ ಮೀಸೆ ಕಟ್ಟಿಕೊಳ್ಳುವ ಮೂಲಕ ರಂಗಪ್ರವೇಶಿಸುವ ಅವಳಿವೀರ ಕಲಾವಿದರು ಇಲ್ಲಿಯೂ ಯೋಧತ್ವವನ್ನೇ ಸಂಕೇತಿಸುತ್ತಾರೆ. ತಲೆಗೆ ಕಟ್ಟಿಕೊಳ್ಳುವ ಚಪ್ಪರೊಂಬು (ಕವಲು ಕೀರೀಟ)ವು ಕೂಡಾ ಯುದ್ಧಕ್ಕೆ ಹೊರಡಲು ಅಣಿಯಾಗಿ ನಿಂತ ಯೋಧನಂತೆ ಕಲಾವಿದನ ಚಹರೆಯನ್ನು ಕಾಣಿಸುತ್ತದೆ. ಈ ಎಲ್ಲಾ ಬಣ್ಣಗಾರಿಕೆಯ ಮೂಲಕ ಅವಳಿವೀರರನ್ನು ಮಧ್ಯಂತರ ಜಗತ್ತಿನಲ್ಲಿ ಪ್ರತಿನಿಧಿಸುವ ಕಲಾವಿದರು ಪರಿಪೂರ್ಣ ಯೋಧರಂತೆ ಕಾಣಿಸುತ್ತಾರೆ. ಮಧ್ಯಕಾಲೀನ ತುಳುವ ಅರಸರ ಕಾಲದ ಯೋಧರು ಧರಿಸುವ ಅಲಂಕಾರವು ಅವಳಿ ವೀರರ ಬಣ್ಣಗಾರಿಕೆಯಲ್ಲಿ ಕ0ಡುಬರುತ್ತಿದ್ದು, ಅವಳಿ ಆರಾಧನೆಯನ್ನು 14–15ನೆಯ ಶತಮಾನದಲ್ಲಿ ಚಾರಿತ್ರಿಕವಾಗಿ ಗುರುತಿಸುತ್ತದೆ.

ಅವಳಿ ವೀರರ ವೇಷಭೂಷಣಗಳು ಭೂತಾರಾಧನೆಯಿಂದ ಅವಳಿ ಆರಾಧನೆಯನ್ನು ಪ್ರತ್ಯೇಕಿಸುತ್ತದೆ. ವೇಷಭೂಷಣವು ಯಕ್ಷಗಾನದಿಂದ ಪ್ರಭಾವಿತವಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಯಕ್ಷಗಾನದಲ್ಲಿ ಬಣ್ಣದ ವೇಷಗಳು ಧರಿಸುವ ವೇಷ ಭೂಷಣವನ್ನೇ ಅವಳಿವೀರರಾಧನೆಯಲ್ಲಿ ಬಳಸಲಾಗುತ್ತದೆ. ಯಕ್ಷಗಾನದಿಂದ ಪ್ರೇರಿತವಾದ ಅವಳಿವೀರರ ವೇಷಭೂಷಣವು ಆಧುನಿಕವಾಗಿದ್ದು ಇತ್ತೀಚೆಗೆ. ಡಾ. ಶಿವರಾಮ ಕಾರ0ತರು ಯಕ್ಷಗಾನವು 17ನೆ ಶತಮಾನದಲ್ಲಿ ಈಗಿನ ರೂಪನ್ನು ಪಡೆಯಿತು ಎಂದು ಬರೆಯುತ್ತಾರೆ. ಅವಳಿವೀರರ ಆರಾಧನೆಯೂ ಈಗಿನ ರೂಪವನ್ನು 17ನೆ ಶತಮಾನದ ಬಳಿಕವೇ ಪಡೆದಿರಬೇಕು. ಯಕ್ಷಗಾನವು ತುಳುನಾಡಿನ ಅತ್ಯಂತ ಪ್ರಸಿದ್ಧವಾದ ಕಲೆ. ಈ ಕಲೆಯ ಪ್ರಭಾವ ಖಂಡಿತವಾಗಿಯೂ ಆರಾಧನಾ ಕಲೆಯನ್ನೂ ಪ್ರಭಾವಿಸಿತು. ಯಕ್ಷಗಾನದ ವೇಷಭೂಷಣ ಮಾತ್ರವಲ್ಲದೆ, ಕುಣಿತವೂ ಕೂಡಾ ಅವಳಿ ವೀರರ ರಂಗವನ್ನು ಪ್ರಭಾವಿಸಿದೆ. ಭೂತಾರಾಧನೆಯಲ್ಲಿರುವಂತೆ ತೆ0ಗಿನಗರಿಯ ಬಳಕೆ ಅವಳಿವೀರರಲ್ಲಿ ಇಲ್ಲ. ಹೀಗಾಗಿ ಯಕ್ಷಗಾನದ ನೇರ ಪ್ರಭಾವ ಮತ್ತು ಅನುಕರಣೆ ಅವಳಿವೀರರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಅವಳಿ ಆರಾಧನೆಯ ಈಗಿನ ರೂಪವು 17ನೆಯ ಶತಮಾನದ ಬಳಿಕವೇ ಬಂದಿರುವುದು ಈ ಮೂಲಕ ಸ್ಪಷ್ಟವಾಗುತ್ತದೆ.

ಕಂಬೆರ್ಲು ಆರಾಧನೆಯು ಮಾನ್ಯೆಚ್ಚಿ ಮೂಲಕ ನೆರವೇರುತ್ತದೆ. ಮಾನ್ಯೆಚ್ಚಿಯಲ್ಲಿ ವೇಷಭೂಷಣ ಅಲಂಕರಣಗಳು ಇರುವುದಿಲ್ಲ. ತಮ್ಮದೇ ಸಮುದಾಯದ ವ್ಯಕ್ತಿಗಳ ಮೂಲಕ ಮಾನ್ಯೆಚ್ಚಿ ಬರಿಸಿ ಕಂಬೆರ್ಲು ಆರಾಧನೆಯನ್ನು ಮಾಡಲಾಗುತ್ತದೆ. ಬೈದೆರ್ಲು, ಮುಗೇರ್ಲುಗಳಂತೆ ಸಮುದಾಯದ ಹೊರಗಿನ ವ್ಯಕ್ತಿಗಳಿಂದ ಅವಳಿವೀರರ ಆರಾಧನೆ ನಡೆಸುವ ಕ್ರಮ ಕಂಬೆರ್ಲುಗಳಲ್ಲಿ ಇಲ್ಲ. ಮಾನ್ಯೆಚ್ಚಿ ರೂಪದ ಆರಾಧನೆಯು ಬೈದೆರ್ಲು, ಮುಗೇರ್ಲು ಅವಳಿವೀರರಲ್ಲೂ ಕಾಣಿಸುತ್ತದೆ. ಇಲ್ಲಿ ಅಲಂಕಾರ ತೀರ ಕಡಿಮೆ. ಆಯಾ ಸಮುದಾಯದ ವ್ಯಕ್ತಿಗಳೇ ಇಲ್ಲಿ ಮಧ್ಯಂತರ ಜಗತ್ತಿನ ವ್ಯಕ್ತಿಗಳಾಗಿ ಆವೇಶ ಬಂದು ಆರಾಧನೆ ನಡೆಸುತ್ತಾರೆ. ಆದರೆ ಸೀಮಿತವಾಗಿ ಬಳಸುವ ವೇಷ ಭೂಷಣಗಳಲ್ಲಿ ವೈವಿಧ್ಯತೆಯನ್ನು ಇಲ್ಲಿ ಸ್ಪಷ್ಟವಾಗಿ ಗುರುತಿಸಬಹುದು. ಬೈದೆರ್ಲು ಮಾನಿಗಳು ಬಿಳಿ ಮುಂಡಿನ ಕಚ್ಚೆಯನ್ನು ಮೊಣಕಾಲುವಿನಿಂದ ಮೇಲೆ ಬಿಗಿಯಾಗಿ ಕಟ್ಟಿ, ಪೂರ್ತಿ ತಲೆ ಮುಚ್ಚುವ ರೀತಿಯಲ್ಲಿ ಮುಂಡಾಸನ್ನು ಕಟ್ಟುತ್ತಾರೆ. ಇದೇ ಬಗೆಯ ವೇಷಭೂಷಣ ಮುಗೇರ್ಲು ಮಾಣಿಗಳಲ್ಲಿ ಇದೆಯಾದರೂ ಕಚ್ಚೆಯನ್ನು ಸಡಿಲವಾಗಿ ಕಟ್ಟುತ್ತಾರೆ. ಕಂಬೆರ್ಲುಗಳ ಮಾಣಿಗಳು ಕಚ್ಚೆಯ ಬದಲಾಗಿ ಮೊಣಕಾಲು ಕಾಣುವಂತೆ ಮುಂಡು ಸುತ್ತಿಕೊಳ್ಳುತ್ತಾರೆ. ಸಾಮಾಜಿಕ ಶ್ರೇಣಿ ಪದ್ಧತಿಯು ಇಲ್ಲಿ ಕಂಡುಬರುತ್ತದೆ. ಅಲ್ಲದೇ, ಕಂಬೆರ್ಲು ಕೃಷಿಕರಾಗಿ ಗುರುತಿಸಿಕೊಂಡರೆ, ಬೈದೆರ್ಲು, ಮುಗೇರ್ಲು ಯೋಧರಾಗಿ ಕಾಣಿಸುತ್ತಾರೆ. ಇವರ ವೃತ್ತಿ ಮತ್ತು ಪ್ರವೃತ್ತಿಗೆ ಅನುಗುಣವಾಗಿ ಆರಾಧನೆಯ ವೇಷಭೂಷಣವೂ ಇರುತ್ತದೆ. ``Folk costume is the visible, outward badge of folk-group identity, worn consciously to express that identity" (Richard M. Dorson; 1972; 295) ಸಮುದಾಯದ ಅಸ್ಮಿತೆಯನ್ನು ಅವಳಿ ವೀರರ ಆರಾಧನೆಯ ಮಾನ್ಯೆಚ್ಚಿಯಲ್ಲಿ ಸ್ಪಷ್ಟವಾಗಿ ಸಮುದಾಯವು ತೋರ್ಪಡಿಸುತ್ತದೆ. ಸಮುದಾಯದ ಅಸ್ಮಿತೆಯನ್ನು ಆರಾಧನೆಯ ಮೂಲಕ ಕಾಪಿಡುವುದರ ಜೊತೆಗೆ, ತನ್ನ ಚಾರಿತ್ರಿಕ ಬೆಳವಣಿಗೆಯ ಕುರುಹುಗಳನ್ನು ಸಮುದಾಯವು ಕಾಯ್ದಿಡುತ್ತದೆ. ಇಂತಹ

ಸಂಗತಿಗಳಿಂದ ತುಳುವ ಅವಳಿವೀರರ ಚರಿತ್ರೆಯು ಮಧ್ಯಕಾಲೀನ ತುಳುವ ಚರಿತ್ರೆಯ ಭಾಗವಾಗಿಯೇ ಒಡಮೂಡುತ್ತದೆ. ಕಂಬೆರ್ಲು, ರಾಜಾಡಳಿತದ ಆದಾಯದ ಮೂಲವಾದ ಕೃಷಿ ಕಾರ್ಮಿಕರಾಗಿದ್ದುದು, ಬೈದೆರ್ಲು, ಮುಗೇರ್ಲು ರಾಜ್ಯದ ರಕ್ಷಣೆಯ ಜವಾಬ್ದಾರಿ ನಿರ್ವಹಿಸಿದ್ದರ ಕುರುಹುಗಳಾಗಿ ಮಾನ್ಯೆಚ್ಚಿ ಸಂದರ್ಭದ ವೇಷಭೂಷಣವು ಕಾಣಿಸಿಕೊಳ್ಳುತ್ತದೆ.

ಹೀಗೆ ತುಳುನಾಡಿನ ಅವಳಿವೀರರ ಆರಾಧನಾ ಪರಿಕರಗಳು ತುಳುವ ಚರಿತ್ರೆಯನ್ನು ಅವಲೋಕಿಸುವುದಕ್ಕೆ ಬಹಳ ಮುಖ್ಯ ಆಕರಗಳಾಗಿವೆ. ಅವಳಿ ವೀರರ ಆರಾಧನೆಯ ಐತಿಹಾಸಿಕತೆಯು ತುಳುವ ಇತಿಹಾಸದ ನಿರ್ಮಿತಿಗೂ ಈ ಮೂಲಕ ಕಾರಣವಾಗುತ್ತದೆ. ತುಳುನಾಡಿನ ಆಡಳಿತಾತ್ಮಕ ವ್ಯವಸ್ಥೆಯ ಸಂಕ್ರಮಣ ಕಾಲಘಟ್ಟವಾದ 14–15ನೆಯ ಶತಮಾನದಲ್ಲಿ ಅವಳಿ ವೀರರು ಕಾಣಿಸಿಕೊಳ್ಳುವ ಮೂಲಕ ತುಳುವ ಚರಿತ್ರೆಯಲ್ಲಿ ಬಹಳ ಮುಖ್ಯ ಸ್ಥಾನವನ್ನು ಪಡೆಯುತ್ತಾರೆ. ತುಳುವ ಜನಪದದ ಮೌಖಿಕ ಚರಿತ್ರೆಯನ್ನು ಅವಳಿ ವೀರರ ಆರಾಧನೆಯ ಪರಿಕರಗಳ ಮೂಲಕ ಹೀಗೆ ಕಟ್ಟಿಕೊಂಡು, ಅವಳಿ ವೀರರ ಕಾಲಘಟ್ಟವನ್ನು 14–15ನೆಯ ಶತಮಾನದಲ್ಲಿ ಕಂಡುಕೊಂಡು, ತುಳುನಾಡಿನ ಇತಿಹಾಸದಲ್ಲೂ ಈ ಕಾಲವನ್ನು ವೀರತ್ವ, ಯೋಧತ್ವದ ಜೊತೆಗೆ ಆಡಳಿತಾತ್ಮಕ ಆದಾಯದ ಮೂಲವಾಗಿಯೂ ಇದ್ದ ಇನ್ನಿತರ ಚಟುವಟಿಕೆಗಳ ಹಿನ್ನೆಲೆಯಾಗಿಯೂ ಮಹತ್ವದ ಕಾಲವೆಂದು ನಿರ್ಧರಿಸಬಹುದು. ಆಡಳಿತ, ಆರ್ಥಿಕ, ಸಾಮಾಜಿಕ, ಮತ್ತು ಆರಾಧನಾ ಪರಿಸ್ಥಿತಿಗಳ ಕಾರಣಕ್ಕಾಗಿ ಮಧ್ಯಕಾಲೀನ ತುಳುನಾಡು ಈ ಮೂಲಕ ಮಹತ್ವದ ಸ್ಥಾನವನ್ನು ಪಡೆಯುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಅಭಯ್ ಕುಮಾರ್ ಕೆ. (ಡಾ)
   ಮುಗೇರರು ಜನಾಂಗ ಜಾನಪದ; ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು –1997
2. ಚಿನ್ನಪ್ಪ ಗೌಡ ಕೆ. (ಡಾ)
   ಭೂತಾರಾಧನೆ ಜಾನಪದೀಯ ಅಧ್ಯಯನ; ಮದಿಪು ಪ್ರಕಾಶನ, ಮಂಗಳಗಂಗೋತ್ರಿ–1990
3. ಕಿಲ್ಲೆ ಎನ್.ಎಸ್ ಮತ್ತು ಶೀನಪ್ಪ ಹೆಗ್ಡೆ ಎನ್.ಎ.
   ಪ್ರಾಚೀನ ತುಳುನಾಡು; ಜಯಶ್ರೀ ಇಂದಿರಾ ಕಿಲ್ಲೆ, ಮಂಗಳೂರು–1954
4. ಮಂಜೇಶ್ವರ ಗಣಪತಿ ರಾವ ಐಗಳ್
   ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ. ಎಂ.ಜಿ.ಎಂ. ಕಾಲೇಜು. ಉಡುಪಿ–2004
5. ನಾವಡ ಎ.ವಿ. (ಪ್ರೊ)
   ಜಾನಪದ ಶೋಧ,; ಅಸ್ಮಿತೆ ಪ್ರಕಾಶನ, ಮಂಗಳೂರು–2015
6. ಪುಂಡಿಕ್ಕಾ ಗಣಪಯ್ಯ ಭಟ್ ( ಡಾ)
   ತೌಳವ; ಸಿಂಧೂರ ಪ್ರಕಾಶನ, ಮೂಡಬಿದರೆ–1997
7. Richard M. Dorson (Ed)
   Folklore and Folklife; The University of Chicago Press Chicago and
   London; 1972
8. ವಾಮನ ನಂದಾವರ (ಡಾ)
   ಕೋಟಿಚೆನ್ನೆಯ ಜಾನಪದೀಯ ಅಧ್ಯಯನ; ಹೇಮಾಂಶು ಪ್ರಕಾಶನ, ಮಂಗಳೂರು–2001
9. ವಿವೇಕ ರೈ ಬಿ.ಎ. (ಡಾ)
   ತುಳು ಜನಪದ ಸಾಹಿತ್ಯ; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–1985
10. ವಿವೇಕ ರೈ ಬಿ.ಎ. (ಡಾ)
    ತುಳು ಸಾಹಿತ್ಯ ಚರಿತ್ರೆ; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2007.